**ಸಾಕ್ಷಿಯನ್ನು ದಿನಾಂಕಃ 22.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ ಕೆ.ವಿ.ಪಿ, ವಕೀಲರಿಂದಃ**

ನನ್ನ ಮುತ್ತಾತ ಸಿದ್ದ ಬಿನ್ ರಂಗಿಜೋಗಿಯವರಿಗೆ ದಾವಾ ಸ್ವತ್ತು ಹೇಗೆ ಬಂದಿರುತ್ತದೆಂದು ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನುಗಳಿರುವುದಿಲ್ಲ. ನನ್ನ ತಂದೆಯ ಸಹೋದರರಿಗೆ ಜಮೀನುಗಳಿದ್ದು, ಸದರಿ ಜಮೀನುಗಳು ನನ್ನ ಮುತ್ತಾತ ಸಿದ್ದ ಬಿನ್ ರಂಗಿಜೋಗಿಯವರಿಂದ ಬಂದ ಸ್ವತ್ತುಗಳಾಗಿರುತ್ತವೆ. ಮರಿಗಂಡಯ್ಯ ಮತ್ತು ಮರಿನಂಜಯ್ಯರವರ ತಂದೆಯ ಹೆಸರು ಸಿದ್ದ ಬಿನ್ ರಂಗಿಜೋಗಿ ಆಗಿರುತ್ತಾರೆ. ಮರಿಗಂಡಯ್ಯ ಮತ್ತು ಮರಿನಂಜಯ್ಯರವರ ತಂದೆಯ ಹೆಸರು ದಡಿಬಸವಯ್ಯ ಆಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಾತನಿಂದ ನನ್ನ ತಂದೆಗೆ ಬಂದಿರುತ್ತದೆ. ದಾವಾ ಸ್ವತ್ತು ನನ್ನ ತಾತ ಮರಿನಂಜಯ್ಯರವರಿಗೆ ಬಂದಿತ್ತು. ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುವಂತೆ ನನ್ನ ತಾತ ಮರಿನಂಜಯ್ಯರವರಿಗೆ ಒಟ್ಟು 5 ಜನ ಗಂಡುಮಕ್ಕಳಿದ್ದರು. ಅವರ ಪೈಕಿ ನನ್ನ ತಂದೆ ಪುಟ್ಟಸ್ವಾಮಿ 4 ನೇ ಮಗನಾಗಿರುತ್ತಾರೆ. ನನ್ನ ತಂದೆಗೆ ಹೇಗೆ ಜಮೀನು ಬಂದಿರುತ್ತದೆಯೋ ಅದೇ ರೀತಿ ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪರವರಿಗೂ ಬೇರೆ ಜಮೀನುಗಳು ಬಂದಿರುತ್ತವೆ. ನನ್ನ ಚಿಕ್ಕಪ್ಪ ಲಿಂಗರಾಜುರವರಿಗೆ ಸರ್ವೆ ನಂ. 336, 366, 367 ಮತ್ತು 368 ರಲ್ಲಿ ಒಟ್ಟು 3 ಎಕರೆ 30 ಗುಂಟೆ ಜಮೀನು ಬಂದಿರುತ್ತದೆ. ನನ್ನ ದೊಡ್ಡಪ್ಪ ಕೃಷ್ಣಮೂರ್ತಿ ಮತ್ತು ಮರಿಸ್ವಾಮಿಯವರಿಗೆ ಸರ್ವೆ ನಂ. 155 ಮತ್ತು ಮತ್ತೊಂದು ಸರ್ವೆ ನಂಬರ್ ನಲ್ಲಿ ಒಟ್ಟು 5 ಎಕರೆ ಜಮೀನು ಬಂದಿರುತ್ತದೆ. ನನ್ನ ಮತ್ತೊಬ್ಬ ದೊಡ್ಡಪ್ಪ ಸಿದ್ದರಾಜುರವರಿಗೂ ಜಮೀನು ಬಂದಿದ್ದು, ಅದರ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ನನ್ನ ತಾತ ಮರಿನಂಜಯ್ಯರವರು ಕೆಲವು ಜಮೀನುಗಳನ್ನು

ಕ್ರಯಪತ್ರದ ಮೂಲಕ ಖರೀದಿಸಿ, ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪರವರಿಗೆ ಕೊಟ್ಟಿರುತ್ತಾರೆ. ನನ್ನ ತಾತ ಕ್ರಯದ ಮೂಲಕ ಪಡೆದಿರುತ್ತಾರೆ ಎಂದು ಹೇಳಿದ ಕ್ರಯಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಕ್ರಯಪತ್ರವನ್ನು ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪರವರಿಂದ ಪಡೆದು ಹಾಜರುಪಡಿಸಲಾಗುವುದಿಲ್ಲ. ಸದರಿ ಕ್ರಯಪತ್ರವನ್ನು ಉಪ-ನೋಂದಣಾಧಿಕಾರಿಗಳ ಕಛೇರಿಯಿಂದ ಪಡೆದು ಹಾಜರುಪಡಿಸಬಹುದು ಎಂದರೆ ಸರಿ. ಮರಿನಂಜಯ್ಯರವರು ಕ್ರಯಕ್ಕೆ ಪಡೆದಿರುತ್ತಾರೆ ಎಂದು ಹೇಳಿರುವ ಕ್ರಯಪತ್ರದಲ್ಲಿ ಮರಿನಂಜಯ್ಯರವರ ತಂದೆಯ ಹೆಸರನ್ನು ನಮೂದಿಸಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ನನ್ನ ತಾತ ಮರಿನಂಜಯ್ಯರವರ ತಂದೆಯ ಹೆಸರು ದಡಿಬಸವಯ್ಯ ಎಂದು ನಮೂದಾಗಿದ್ದು, ನಾನು ಹೇಳಿದಂತೆ ಸಿದ್ದ ಬಿನ್ ರಂಗಿಜೋಗಿ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ಮರಿನಂಜಯ್ಯರವರ ಹೆಸರಿನಲ್ಲಿ ಹಕ್ಕು ಬದಲಾವಣೆ ವಹಿ ದಾಖಲಾಗಿರುತ್ತದೆ. ಸದರಿ ದಾಖಲೆಯನ್ನು ಹಾಜರುಪಡಿಸುತ್ತೀರಾ ಎಂದರೆ ಅದು ಪಿತ್ರಾರ್ಜಿತ ಆಸ್ತಿಯಾಗಿದ್ದರಿಂದ ಈ ಹಿಂದೆ ಆ ರೀತಿ ದಾಖಲಾಗುತ್ತಿರಲಿಲ್ಲ. ಕಂದಾಯ ದಾಖಲೆಗಳು ಸಿದ್ದ ಬಿನ್ ರಂಗಿಜೋಗಿ ರವರಿಂದ ನೇರವಾಗಿ ನನ್ನ ತಂದೆಯ ಹೆಸರಿಗೆ ದಾಖಲಾಗಿರುತ್ತವೆ. ಸಿದ್ದ ಬಿನ್ ರಂಗಿಜೋಗಿರವರಿಂದ ನನ್ನ ತಾತ ಮರಿನಂಜಯ್ಯರವರ ಹೆಸರಿಗೆ ಕಂದಾಯ ದಾಖಲೆಗಳು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಡಿ-15 ನನ್ನ ತಾತನಿಂದ ನನ್ನ ತಂದೆಗೆ ಹಕ್ಕು ಬದಲಾವಣೆ ಮೂಲಕ ನಮೂದಾಗಿರುವ ದಾಖಲೆಯಾಗಿಲ್ಲ ಎಂದರೆ ಸರಿ. ನಿಡಿ-15 ನ್ನು ಹೊರತುಪಡಿಸಿ ನನ್ನ ತಂದೆಗೆ ಹಕ್ಕು ಬದಲಾವಣೆಯಾಗಿರುವ ಬಗ್ಗೆ ಇತರೆ ದಾಖಲೆಗಳಿರುವುದಿಲ್ಲ. ನಾವು ಪರಿಶಿಷ್ಟ ಜಾತಿ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನಮ್ಮ ಜನಾಂಗದಲ್ಲಿ ನಾಯಕ ಎಂದು ಹೆಸರನ್ನು ಇಟ್ಟುಕೊಳ್ಳುವುದಿಲ್ಲ ಎಂದರೆ ಸರಿ. ನಾನು ಹೇಳುವ

ಸಿದ್ದ ಬಿನ್ ರಂಗಿಜೋಗಿ ಎನ್ನುವುದು ಸಿದ್ದನಾಯಕ ಬಿನ್ ರಂಗಿಜೋಗಿ ಆಗಿರುತ್ತದೆ ಎಂದರೆ ಸರಿಯಲ್ಲ. ನಮಗು ಮತ್ತು ವಾದಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದಿನ ಪಾಟೀಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**